ವಿವರಗಳು :-

1. ಬಡೇಪೂರ ಹಂತ-1ರಲ್ಲಿ - 1770 ನಿವೇಶನಗಳು
2. ರಾಜಾಪುರ-ಬಡೇಪೂರ-899 ನಿವೇಶನಗಳು
3. ಶೇಖರೋಜಾ ಹಂತ-2-1142 ನಿವೇಶನಗಳು
4. ಧರಿಯಾಪೂರ-ಕೋಟನೂರ - 2738 ನಿವೇಶನಗಳು
5. ಬಡೇಪೂರ ಹಂತ-2-286 ನಿವೇಶನಗಳು
6. ಮಹಾತ್ಮ ಗಾಂಧಿ ಲಾರಿ ತಂಗುದಾಣ-391 ನಿವೇಶನಗಳು
7. ಎಸ್.ವಿ.ಹಂತ - 1 -100 ನಿವೇಶನಗಳು
8. ಪಿಲ್ಟರ್ ಬೆಡ್ ಹಂತ-4-207 ನಿವೇಶನಗಳು
9. ಕೋಟನೂರ-ಡಿ-556 ನಿವೇಶನಗಳು
10. ಪಟೇಲ(ವಾಣಿಜ್ಯ) ಹಂತ-1-35 ನಿವೇಶನಗಳು

ಆ) ಪ್ರಾಧಿಕಾರವು ನಿರ್ಮಿಸಲಾದ 10 ಹೊಸ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳಾದ ಮೇಟಲ್ ರಸ್ತೆ, ಡಾಂಬರೀಕರಣ ನಿರ್ಮಾಣ, ನೀರು ಸರಬರಾಜು, ವಿದ್ಯುದೀಕರಣ ಸೌಲಭ್ಯಗಳನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.

1. ಬಡೋಪೂರ ಹಂತ-1, ರಾಜಾಪೂರ-ಬಡೇಪೂರ (ಸೆಕ್ಟರ್-ಎ, ಬಿ), ಮಹಾತ್ಮ ಗಾಂಧಿ ಲಾರಿ ತಂಗುದಾಣ ರಲ್ಲಿ ಬಡಾವಣೆಗಳು.

2. ಬಡೇಪೂರ ಹಂತ-2, ಸರ್ದಾರ ವಲ್ಲಭಬಾಯಿ ಪಟೇಲ ಹಂತ-1 (ವಸತಿ ಹಾಗೂ ವಾಣಿಜ್ಯ) ಫಿಲ್ಟರ್ ಬೆಡ್ ಹಂತ-4, ಧರಿಯಾಪೂರ-ಕೋಟನೂರು(ಸೆಕ್ಟರ್-1 ಮತ್ತು 2) ರಾಜಾಪೂರ ಬಡೇಪೂರ (ಸೆಕ್ಟರ್-ಬಿ)ಗಳಿಗೆ ಶೇ.60 ರಿಂದ ಶೇ.75.

3. ಕೋಟನೂರ-ಡಿ, ಶೇಖರೋಜಾ ಹಂತ-2 ಧರಿಯಾಪೂರ-ಕೋಟನೂರು (ಸೆಕ್ಟರ್-3,4) ಗಳಿಗೆ ಶೇ.20 ರಿಂದ ಶೇ.45 ಸೌಕರ್ಯಗಳನ್ನು ಒದಗಿಸಲಾಗಿದೆ.

ಧರಿಯಾಪೂರ-ಕೋಟನೂರು, ಕೋಟನೂರ-ಡಿ, ರಾಜಾ ಪೂರ-ಬಡೇಪೂರ (ಸೆಕ್ಟರ್-ಬಿ) ಬಡಾವಣೆಗಳಲ್ಲಿ ನೀರು ಸರಬರಾಜು ವಿದ್ಯುತ್ತೀಕರಣಗಳಿಗೆ ಸಂಬಂಧಪಟ್ಟ ಇಲಾಖೆಗಳಿಂದ ಅಂದಾಜು ಪಟ್ಟಿಯನ್ನು ನಿರೀಕ್ಷಿಸಲಾಗಿದೆ. ಅಂದಾಜು ಪಟ್ಟಿ ಬಂದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಎಂ.ಎಸ್.ಕೆ.ಮಿಲ್‌ನ ವಸತಿ ಮತ್ತು ವಾಣಿಜ್ಯ ಬಡಾವಣೆ 105 ಎಕರೆ ವಿಸ್ತೀರ್ಣ ಜಮೀನಿನಲ್ಲಿ ರೂ.4163 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒಟ್ಟು 1019 ವಿವಿಧ ಅಳತೆಯ ನಿವೇಶನಗಳನ್ನು ರಚಿಸಲು ಉದ್ದೇಶಿಸಲಾಗಿದೆ.

914(1447) ಶ್ರೀ ಹಾಲಪ್ಪ ಹೆಚ್. (ಹೊಸನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನ ಕುಂಸಿಯಲ್ಲಿರುವ ಹಾರ್ನಳ್ಳಿ ಮ್ಯಾಂಗ್ನೀಸ್ ಗಣಿಗಾರಿಕೆಯನ್ನು ಮುಚ್ಚಲು ಕಾರಣವೇನು ;

ಆ) ಇದನ್ನು ಪುನಃ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

ಇ) ಪುನಃ ಪ್ರಾರಂಭಿಸಲು ಇರುವ ತೊಂದರೆಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):

ಅ) ಶಿವಮೊಗ್ಗ ತಾಲ್ಲೂಕಿನ ಕುಂಸಿಯಲ್ಲಿರುವ ಹಾರ್ನಳ್ಳಿ ಮ್ಯಾಂಗನೀಸ್ ಗಣಿ ಇರುವ ಪ್ರದೇಶವು ಅರಣ್ಯ ಪ್ರದೇಶವಾಗಿರುತ್ತದೆ. ಅರಣ್ಯ ಇಲಾಖೆಯವರು ಸುಪ್ರೀಂ ಕೋರ್ಟ್ ಆದೇಶದನ್ವಯ ಸದರಿ ಪ್ರದೇಶವನ್ನು ಅಭಯಾರಣ್ಯ ಪ್ರದೇಶವನ್ನಾಗಿ ಮಾಡಿ, ಗಣಿಗಾರಿಕೆಯನ್ನು ಮುಂದುವರಿಸಲು ನಿರಾಕ್ಷೇಪಣಾ ಪತ್ರ ನೀಡದಿರುವುದರಿಂದ, ಗಣಿಗಾರಿಕೆಗೆ ಅನುಮತಿ ನೀಡಿರುವುದಿಲ್ಲ.

ಆ) ಅರಣ್ಯ ಇಲಾಖೆಯು ಅರಣ್ಯ ಸಂರಕ್ಷಣಾ ಕಾಯ್ದೆ, 1980ರ ಪ್ರಕಾರ ಅನುಮತಿ ನೀಡಿದಲ್ಲಿ ಗಣಿಗಾರಿಕೆಯನ್ನು ಪುನಃ ಪ್ರಾರಂಭಿಸಬಹುದು.

ಇ) ಅರಣ್ಯ ಇಲಾಖೆಯು ನಿರಾಕ್ಷೇಪಣಾ ಪತ್ರ, ನೀಡುವವರೆಗೆ ಗಣಿಗಾರಿಕೆಯನ್ನು ಪ್ರಾರಂಭಿಸಲು ಸಾಧ್ಯವಾಗದು.

915(1017) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ(ಗುಲ್ಬರ್ಗಾ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ನಗರಕ್ಕೆ ಕುಡಿಯುವ ನೀರನ್ನು ಪೂರೈಸುವ ಭೀಮಾ ಬ್ಯಾರೇಜ್‌ನಿಂದ ಬರುವ ಮುಖ್ಯ ಪೈಪ್ ಲೈನ್ ಒಡೆದು ನೀರು ಸೋರಿಕೆಯಿಂದ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದರೆ, ಪೈಪ್ ಲೈನ್ ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ಮತ್ತು ಎಷ್ಟು ಹಣ ಬಿಡುಗಡೆಯಾಗಿದೆ;

ಇ) ಕುಡಿಯುವ ನೀರು ಪೂರೈಕೆಗೆ ನೀರೆತ್ತುವ ಯಂತ್ರ ಕೆಟ್ಟು ಹೋಗಿ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ವಿದ್ಯುತ್ ಪೂರೈಕೆ ಸರಿಯಾಗಿ ಆಗದೇ ಇರುವುದರಿಂದ ಜನರೇಟರ್ ವ್ಯವಸ್ಥೆ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ;

ಊ) ಬಂದಿದ್ದರೆ, ಜನರೇಟರ್ ಯಾವಾಗ ಅಳವಡಿಸಲಾಗುವುದು ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಬಂದಿದೆ

ಆ) ದೊಡ್ಡ ಪ್ರಮಾಣದ ಕೊಳವೆ ಮಾರ್ಗ ಸೋರುವಿಕೆ/ಒಡೆದು ಹೋಗುವುದು, ಇವುಗಳನ್ನು ತಕ್ಷಣದಲ್ಲೇ ಸರಿಪಡಿಸಲಾಗುತ್ತಿದೆ. ಮತ್ತು ಸಣ್ಣ ಪ್ರಮಾಣದ ಕೊಳವೆ ಮಾರ್ಗ ಸೋರುವಿಕೆಯನ್ನು ಮಹಾನಗರಪಾಲಿಕೆಯಿಂದ ಹಣ ಸ್ವೀಕೃತಿಯಾದ ನಂತರ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಗುಲ್ಬರ್ಗಾ ಮಹಾನಗರಪಾಲಿಕೆಯು ಸಗಟು ನೀರು ಸರಬರಾಜು ನಿರ್ವಹಣೆಗಾಗಿ ವೆಚ್ಚವನ್ನು ಸರಿಯಾಗಿ ಭರಿಸುತ್ತಿರುವುದಿಲ್ಲ. ಪ್ರತಿ ತಿಂಗಳು ಕನಿಷ್ಠ ರೂ.5.00 ಲಕ್ಷಗಳ ಮೊತ್ತವನ್ನು ಬಿಡುಗಡೆ ಮಾಡಲು ಕೋರಲಾಗಿದೆ. ಆದರೆ ಮಹಾನಗರಪಾಲಿಕೆ ಪ್ರತಿ ತಿಂಗಳು ಸುಮಾರು ರೂ. 3.00 ಲಕ್ಷ